ಅಸಲು ದಾವೆ ಸಂಖ್ಯೆ - 312/2018
ಡಿ.ಡಬ್ಲ್ಯೂ - 01
ದಿನಾಂಕಃ 16-01-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಂ.ಪಿ ವಕೀಲರಿಂದ

ನೀವು ದತ್ತಕವಾದಾಗ ವಾದಿಯರು ಯಾರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಅವರ ತಂದೆ ತಾಯಿಯ ಮನೆಯಾದ ಹಳೆ ಬಂಕಾಪುರದಲ್ಲಿ ವಾಸವಾಗಿದ್ದರು. ವಾದಿಯು ಶಾಲೆಯನ್ನು ಎಲ್ಲಿ ಕಲಿತಿರುತ್ತಾರೆ ಎಂದರೆ ತವರುಮೆಳ್ಳಿಹಳ್ಳಿ ಗ್ರಾಮದಲ್ಲಿ ಕಲಿತಿರುತ್ತಾರೆ. ತವರುಮೆಳ್ಳಿಹಳ್ಳಿ

ಗ್ರಾಮದ ಯಾರ ಮನೆಯಲ್ಲಿ ಇದ್ದು ವಾದಿಯು ಶಾಲೆಗೆ ಹೋಗಿರುತ್ತಾರೆ ಎಂದರೆ ನಮ್ಮ ದತ್ತಕ ತಾಯಿಯ ಮನೆಯಲ್ಲಿ ಇದ್ದು ಶಾಲೆಗೆ ಹೋಗಿರುತ್ತಾರೆ. ಆ ವೇಳೆಯಲ್ಲಿ ನೀವು ನಿಮ್ಮ ದತ್ತಕ ತಂದೆ ತಾಯಿಯ ಮನೆಯಲ್ಲಿಯೇ ವಾಸವಾಗಿದ್ದೀರಿ ಎಂದರೆ ಸರಿ. ವಾದಿಯು ಶಾಲೆಗೆ ದಾಖಲಾಗಿದ್ದನ್ನು ನೀವು ನೋಡಿದ್ದೀರಿ ಎಂದರೆ ಸರಿ. ವಾದಿಯು ಶಾಲೆಗೆ ದಾಖಲಾದಾಗ ಶಾಲಾ ದಾಖಲಾತಿಯಲ್ಲಿ ವಾದಿಯ ಹೆಸರು ದ್ರಾಕ್ಷಾಯಣಿ ತಂದೆಯ ಹೆಸರು ಚನ್ನಬಸಪ್ಪ ತಳವಾರ ಇತ್ತು ಎಂದರೆ ಸರಿಯಲ್ಲ.

ವಾದಿಯು ಈಗ ಯಾರ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ವಾದಿಯು ಚನ್ನಬಸಪ್ಪನ ಮಗಳು ಆಗಿದ್ದರೂ ಸಹ ನೀವು ದತ್ತಕ ಪತ್ರವನ್ನು ಸೃಷ್ಟಿಸಿ ದತ್ತಕರಾಗಿದ್ದೀರಿ ಎಂದರೆ ಸರಿಯಲ್ಲ.

ದತ್ತಕ ಕಾಯ್ದೆಯ ಪ್ರಕಾರ ಯಾರಿಗೆ ಸಂತಾನ ಇರುವುದಿಲ್ಲವೋ ಅವರು ಮಾತ್ರ ದತ್ತಕವನ್ನು ಪಡೆಯಬಹುದು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಮ್ಮನ್ನು ಬೇಕಾಯ್ದೆಶಿರವಾಗಿ ದತ್ತಕ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಿಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯು ಚನ್ನಬಸಪ್ಪನ ಮಗಳು ಆಗಿದ್ದರೂ ಸಹ ಬೇಕಾಯ್ದೆಶಿರವಾಗಿ ದತ್ತಕ ಪತ್ರವನ್ನು ಸೃಷ್ಟಿಸಿಕೊಂಡು ದತ್ತಕವಾಗಿರುತ್ತೀರಿ ಎಂದರೆ ಸರಿಯಲ್ಲ.

ವಾದಿಯ ತಂದೆಯ ಹೆಸರು ಚನ್ನಪ್ಪ ಎಂದು ನಮೂದು ಇರುವ ಯಾವುದಾದರು ದಾಖಲೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಚನ್ನಬಸಪ್ಪನ ಎರಡನೆ ಹೆಂಡತಿಯಾದ ನಾಗವ್ವ ಖಾಸಾ ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿಯನ್ನು ನೀಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.